of the constitution. Selection committee has powers to see that ineligible candidates should not be selected. All sections should be given proportional representation. So, the basic identifying authority is the Grams Sabha. Suppose, there is no consensus, then who has to select? I am not going toweaken the norms of democracy.

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್ : ಅವರು ಆಗುವುದೇ ಇಲ್ಲವೆಂದು ಹೇಳುತ್ತಿದ್ದಾರೆ, ತಾವು ಅರ್ಧ ಗಂಟೆ ಚರ್ಚೆಗೆ ಇಟ್ಟುಕೊಂಡಿದ್ದೀರಿ.

Mr. SPEAKER : I have allowed it for half an hour discussion. ಸರ್ಕಾರದಿಂದ ಏನು ಉತ್ತರ ಬರುತ್ತದೆ ನೋಡೋಣ.

ಶ್ರೀ ಸಿ. ಬೈರೇಗೌಡ : ಬೆಳಗಾಂನಲ್ಲಿ ನಾಳೆ ದಿವಸ ಸಭೆ ಕರೆದಿದ್ದಾರೆ. ಆ ಸಭೆಯನ್ನು ಮುಂದೆ ಹಾಕಿಸಿ, ನಾಳೆ ಏನಾದರೂ ತೀರ್ಮಾನವಾದರೆ ಹೇಗೆ?

Mr. SPEAKER : I will talk tc the Minister, not on the floor of the House. ಮಾನ್ಯ ಮಂತ್ರಿಗಳಿಗೆ ನಮ್ಮ ಕಛೇರಿಯಲ್ಲಿ ಕರೆಸಿ ಮಾತನಾಡುತ್ತೇನೆ.

ಬೆಂಗಳೂರು ನಗರದ ಸುತ್ತಮುತ್ತಲಿನ ಸರ್ಕಾರಿ ಜಮೀನುಗಳನ್ನು ಒತ್ತುವರಿ ಮಾಡಿರುವುದು

59 (372) ಶ್ರೀ ಸಿ. ಚನ್ನಿಗಪ್ಪ (ಕೊರಟಗೆರೆ) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ

ಅ) ಬೆಂಗಳೂರು ನಗರದ ಸುತ್ತಮುತ್ತಲಿನ ಸರ್ಕಾರಿ ಜಮೀನನ್ನು ಭೂ ಕಬಳಿಕೆದಾರರಿಂದ ರಕ್ಷಿಸಲು ಕಷ್ಟವಾದ್ದರಿಂದ ಈ ಜಮೀನನ್ನು ಬಹಿರಂಗ ಹರಾಜಿನಲ್ಲಿ ವಿಲೇಮಾರಿ ಮಾಡುವಂತಹ ವಿಶೇಷ ಜಿಲ್ಲಾಧಿಕಾರಿಗಳು ಈ ಹಿಂದೆ ಸರ್ಕಾರಕ್ಕೆ ಶಿಫಾರಸ್ಸು ಮಾಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ? ಈ ಬಗ್ಗೆ ಸರ್ಕಾರವು ಯಾವ ಕ್ರಮ ಕೈಗೊಂಡಿದೆ?

ಆ) ಈ ಸರ್ಕಾರಿ ಜಮೀನಿನಲ್ಲಿ ದಿನ ನಿತ್ಯವೂ ಅಕ್ರಮ ಕಟ್ಟಡಗಳು ನಿರ್ಮಾಣವಾಗುವುದನ್ನು ತಡೆಗಟ್ಟಲಾಗುತ್ತಿದೆಯೇ ಹಾಗೂ ಈಗಾಗಲೇ ಅಕ್ರಮವಾಗಿ ನಿರ್ಮಿಸಲಾಗಿರುವ ಕಟ್ಟಡಗಳನ್ನು ತೆರವುಗೊಳಿಸಲಾಗುವುದೆ;

ಇ) ಈ ಸರ್ಕಾರಿ ಜಮೀನುಗಳ ಸಂಬಂಧ ನ್ಯಾಯಾಲಯದಲ್ಲಿರುವ ಜಮೀನುಗಳ ವಿವರ ಹಾಗೂ ಅವುಗಳು ಎಷ್ಟು ಎಷ್ಟು ವರ್ಷಗಳಿಂದ ನ್ಯಾಯಾಲಯಗಳಲ್ಲಿವೆ ಮತ್ತು ಅವುಗಳ ಇತ್ಯರ್ಥಕ್ಕೆ ಸರ್ಕಾರ ಯಾವುದಾದರೂ ವಿಶೇಷ ಕ್ರಮ ಕೈಗೊಂಡಿದೆಯೇ;

ಈ) ಈ ಸರ್ಕಾರಿ ಜಮೀನುಗಳನ್ನು ಹರಾಜು ಮಾಡಿದಲ್ಲಿ ಸರ್ಕಾರಕ್ಕೆ ಅಂದಾಜು ಎಷ್ಟು ಕೋಟಿ ಆದಾಯ ಬರಬಹುದು ವಿವರಗಳೊಂದಿಗೆ ತಿಳಿಸುವುದು;

ಶ್ರೀ ಹೆಚ್.ಸಿ.ಶ್ರೀಕಂಠಯ್ಯ (ಕಂದಾಯ ಸಚಿವರು) :

ಅ) ಬಂದಿದೆ. ಸಾಧಕ ಭಾದಕಗಳನ್ನು ಪರಿಶೀಲಿಸಲಾಗುತ್ತಿದೆ.

ಆ) 1964 ಕರ್ನಾಟಕ ಭೂ ಕಂದಾಯ ಅಧಿನಿಯಮ ಕಲಂ 94-ಸಿ ಅನ್ವಯ ಅರ್ಹ ಪ್ರಕರಣಗಳಲ್ಲಿ ವಾಸದ ಕಟ್ಟಡಗಳನ್ನು ಸಕ್ರಮೀಕರಣಗೊಳಿಸಲು ಪರಿಶೀಲಿಸಿ ಉಳಿದ ಪ್ರಕರಣಗಳಲ್ಲಿ ತೆರವುಗೊಳಿಸಲು ನಿರ್ದೇಶನಗಳನ್ನು ಜಲ್ಲಾಧಿಕಾರಿಗಳಿಗೆ ನೀಡಲಾಗಿದೆ.

ಇ) ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ. ಹಾಗೂ ನ್ಯಾಯಾಲಯದಲ್ಲಿ ಬಾಕಿ ಇರುವ ಪ್ರಕರಣಗಳಲ್ಲಿ ಶೀಘ್ರವಾಗಿ ವಿಲೇಗೊಳಿಸಲು ಅಗತ್ಯ ಕ್ರಮ ಕೈಗೊಳ್ಳುವಂತೆ ಸರ್ಕಾರಿ ವಕೀಲರನ್ನು ಕೋರಲಾಗಿದೆ.

ಈ) ಜಮೀನುಗಳ ಅಂದಾಜು ಮೌಲ್ಯ 80.00 ಕೋಟಿ ರೂ. ಗಳು

ಕರ್ನಾಟಕ ವಿಧಾನ ಸಭೆ

ವಿಧಾನ ಸಭಾ ಸದಸ್ಯರಾದ ಶ್ರೀ ಸಿ. ಚನ್ನಿಗಪ್ಪ ಇವರು ಚುಕ್ಕೆ ಗುರ್ತಿನ ಪ್ರಶ್ನೆ ಸಂಖ್ಯೆ: 372ಕ್ಕೆ **ಅನುಬಂಧ**

ಕ್ರಮ ಸಂಖ್ಯೆ	ತಾಲ್ಲೂಕು	ಗ್ರಾಮ	ಸರ್ವೆ ನಂ:	ವಿಸ್ತೀರ್ಣ ಎ.ಗುಂ.	ರಿಟ್ ಪಿಟೀಷನ್: ಒ.ಎಸ್.ಸಂಖ್ಯೆ	ದಾವೆದಾರರು
1	2	3	4	5	6	7
1.	ಬೆಂಗಳೂರು ಉತ್ತರ	ದೊಡ್ಡಬಿದರಕಲ್ಲು	75	14.00	ರಿಟ್ ಪಿ. 14983:97	ರಂಗಸ್ವಾಮಿ ಮತ್ತು ಇತರೆ ವಿರುದ್ಧ ಸರ್ಕಾರ
2.		ಲಕ್ಷ್ಮೀಪುರ	11	5.00	ರಿಟ್ ಪಿ: 18455:97	ಕೆ.ವಿ. ಪ್ರಕಾಶ್ ವಿರುದ್ಧ
3.		ಭಿನ್ನಮಂಗಲ	117 118 119	5. 10	ರಿಟ್ ಪಿ: 36371 37483-84:98	ನಾರಾಯಣಸ್ವಾಮಿ ಮತ್ತು ಇತರರು ವಿರುದ್ಧ ಸರ್ಕಾರ
4.		ಲಿಂಗಧೀರನಹಳ್ಳಿ	3 4	9.00	ರಿಟ್ ಪಿ:2446-62: 95	ಬೈಲಾಂಜನಪ್ಪ ಮತ್ತು ಇತರರು ವಿರುದ್ಧ ತಹಸೀಲ್ದಾರ್ ಮತ್ತು ಸರ್ಕಾರ
5.		ಶ್ರೀಕಂಠಪುರ	25	0.29	ಒ.ಎಸ್: 85:00	ಬಿ.ವಿ. ನಾಗರಾಜ ಮತ್ತು ಇತರರ ವಿರುದ್ಧ ರಾಜ್ಯ ಸರ್ಕಾರ

1	2	3	4	5	6	7
6.		ನಾಗರಭಾವಿ	20 21 22 23	26.00	ರಿಟ್ ಪಿ: 33870:96 33881-82:96	ಶ್ರೀಮತಿ ಲಕ್ಷ್ಮಿದೇವಮ್ಮ ಮತ್ತು ಇತರೆ ವಿರುದ್ಧ ರಾಜ್ಯ ಸರ್ಕಾರ
7.		ಮಲ್ಲಸಂದ್ರ	51	17.00	ರಿಟ್ ಪಿ: 44471 ರಿಂದ 472:99	ಶ್ರೀ ಎನ್.ಕೆ. ಸತ್ಯಮೂರ್ತಿ ಮತ್ತು ಇತರೆ ವಿರುದ್ಧ ರಾಜ್ಯ ಸರ್ಕಾರ ಮತ್ತು ಇತರರು
8.		ಲಕ್ಷ್ಮೀಪುರ	11	12.00	ಒ.ಎಸ್ : 7213:99	ಅಬ್ದುಲ್ ಶಕ್ಕೂರ್
9.		ಸಿಂಗನಾಯಕನಹಳ್ಳಿ	112	2.00	ಒ.ಎಸ್ : 352:00	ಗೋವಿಂದರಾಜರೆಡ್ಡಿ
10.		ಯಶವಂತಪುರ	52: 1ಎ	1.00	ರಿಟ್ ಪಿ: 38078:99	ಮಾರಣ್ಣ ಮತ್ತು ಇತರರು
11.	ಬೆಂಗಳೂರು ಉತ್ತರ (ಅಪರ)	ಲಿಂಗರಾಜಸಾಗರ	01	4.22	ರಿಟ್ ಪಿ: 18422:97 5699:99	
12.		ಇಲಗಲ್‌ಪುರ	50	4.00	ರಿಟ್ ಪಿ: 16981:99	ವಿ. ವೆಂಕಟಸ್ವಾಮಿ ವಿರುದ್ಧ ರಾಜ್ಯ ಸರ್ಕಾರ ಮತ್ತು ಇತರರು
13.	ಬೆಂಗಳೂರು ದಕ್ಷಿಣ	ಯಳ್ಳುಕಂಟೆ ಹರಳುಕುಂಟೆ	31 169	15.11 12.31	ರಿಟ್ ಪಿ:22420:97	ಎ.ಜಿ. ಶಿವಶಂಕರರೆಡ್ಡಿ ವಿರುದ್ಧ ಸರ್ಕಾರ
14.		ಕೆಂಗೇರಿ	205	9.00	ಕೆಎಟಿ ಅಫೀಲು ನಂ: 577:95 578 ಮತ್ತು 579:95	ಟಿ.ನಾಗರಾಜು ಬಿನ್ ತಿಮ್ಮಯ್ಯ ವಿರುದ್ಧ ವಿ.ಜಿ.

1	2	3	4	5	6	7
15.		ಜರಗನಹಳ್ಳಿ	29:2ಸಿ	4.00	ಎಸ್ಎಲ್ಪಿ 15772: 99 ಸರ್ವೋಚ್ಚ ನ್ಯಾಯಾಲಯ	ಶ್ರೀ ಆರ್. ಅಪ್ಪಣ್ಣರೆಡ್ಡಿ ವಿರುದ್ಧ ಸರ್ಕಾರ ಮತ್ತು ಇತರರು
16.		ಕೋರಮಂಗಲ	103 105 106 108, 110	17.22	17529:96 42686:95	ಶ್ರೀಮತಿ ಉಷಾರಾಣಿ ಸುಕ್ಬಂದರ್ ಕೌಲ್ ವಿರುದ್ಧ ರಾಜ್ಯ ಸರ್ಕಾರ ಮತ್ತು ಇತರೆ
17.		ರಾಮೋಹಳ್ಳಿ	90	23. 18	ರಿಟ್ ಪಿ. 889 890 :99	ಅನಿತಾ ಆರ್. ಪ್ರಭು ಮತ್ತು ಒಬ್ಬರು ವಿರುದ್ಧ ರಾಜ್ಯ ಸರ್ಕಾರ ಮತ್ತು ಇತರರು
18.		ದೊಡ್ಡಬೆಲೆ	07	18.00	ಒ.ಎಸ್: 715:96	ಚಿನ್ನಪ್ಪ ವಿರುದ್ಧ ರಾಜ್ಯ ಸರ್ಕಾರ
19.		ಹೊಸಕೆರೆಹಳ್ಳಿ	52	4.00	ರಿಟ್ ಪಿ: 12961 ರಿಂದ 62:99	ಬಿ. ರಾಮಯ್ಯ ಚಂದ್ರವದನ ವಿರುದ್ಧ ರಾಜ್ಯ ಸರ್ಕಾರ ಮತ್ತು ಇತರರು
20.		ಭೀಮನಕುಪ್ಪೆ	180	24.00	ರಿಟ್ ಪಿ: 13814 ರಿಂದ 817:99	ಶ್ರೀಮತಿ ಸೀತಮ್ಮ ವಿರುದ್ಧ ರಾಜ್ಯ ಸರ್ಕಾರ
21.	ಬೆಂಗಳೂರು ಇಕ್ಷಿಣ (ಅಪರ)	ನಾಗಗೊಂಡನಹಳ್ಳಿ	122 123	25. 18	ರಿಟ್ ಪಿ:6813 ರಿಂದ 17:99	ಮುನಿಸ್ವಾಮಪ್ಪ ಮತ್ತು ಇತರರು ವಿರುದ್ಧ ರಾಜ್ಯ ಸರ್ಕಾರ ಮತ್ತು ಇತರರು

1	2	3	4	5	6	7
22.		ಕೋಡಿಹಳ್ಳಿ	161	1.35	ಒ.ಎಸ್. 11158 :97	ಎಂ.ಗೋಪಾಲರೆಡ್ಡಿ ಮತ್ತು ಒಬ್ಬರು ವಿರುದ್ಧ ರಾಜ್ಯ ಸರ್ಕಾರ
23.		ಕಲ್ಕೆರೆ	430	8.23	ಒ.ಎಸ್: 32682:95 5279:95	ರೇವಣ್ಣ ಮತ್ತು ಇತರರು ವಿರುದ್ಧ ರಾಜ್ಯ ಸರ್ಕಾರ
24.		ಶಿಂಗೇನ ಅಗ್ರಹಾರ	57	2.00	ರಿಟ್ ಪಿ: 504:99	ಕೆ.ಎಸ್. ಶಂಕರ
25.		ಹುಲೆಮಂಗಲ	155:30 155:31 156:63 156:64	11.00	ರಿಟ್ ಪಿ: 38503: 509 :00 ಒ.ಎಸ್: 196ರಿಂದ 200 : 2000	ನಾಗಪ್ಪರೆಡ್ಡಿ ಮತ್ತು ಇತರೆ 6 ಜನರು ಹಾಗೂ ರಾಜ್ಯ ಸರ್ಕಾರ
26.		ಚಿಕ್ಕನಾಗಮಂಗಲ	29	2.00	ರಿಟ್ ಪಿ: 33438	ಗುರಪ್ಪರೆಡ್ಡಿ ವಿರುದ್ಧ ತೇಲಿ ಮುನಿಯಪ್ಪ ಮತ್ತು ರಾಜ್ಯ ಸರ್ಕಾರ

ಶ್ರೀ ಸಿ. ಚನ್ನಿಗಪ್ಪ : ಎಂದೆಂದೂ ಮಾಡದ ಕೆಲಸವನ್ನು ಈ ಸರ್ಕಾರ ಮಾಡಿದೆ ಎಂದು ನಾನು ಹೇಳುವುದಕ್ಕೆ ಇಷ್ಟ ಪಡುತ್ತೇನೆ. ಯಾವ ಸರ್ಕಾರವೂ ಮಾಡಿಲ್ಲ. ಲಾಂಡ್ ಗ್ರಾಬರ್ಸ್ ಎಂದು ಈ ರಾಜ್ಯದಲ್ಲಿ ಏನಾಯಿತು ಅದರಲ್ಲೂ ಬೆಂಗಳೂರು ನಗರದಲ್ಲಿ ಮಂತ್ರಿಗಳಾಗಿದ್ದವರು, ಶಾಸಕರಾಗಿದ್ದವರು ಕೋಟ್ಯಾಂತರ ಆಸ್ತಿ ಕಬಳಿಸಿ 20 ಕೋಟಿ ರೂಪಾಯಿಯವರೆಗಿನ ಕಟ್ಟಡಗಳನ್ನು ಕಟ್ಟಿದ್ದರು, ಈ ಸರ್ಕಾರ ಅದನ್ನು ನೆಲಸಮಗೊಳಿಸಿ ಅಕ್ರಮವನ್ನು ಸಕ್ರಮಗೊಳಿಸಿದ್ದಾರೆ. ಅದಕ್ಕೆ ಕೋಟ್ಯಾಂತರ ರೂಪಾಯಿಗಳ ಆಸ್ತಿಯನ್ನು ಮುಟ್ಟುಗೋಲು ಹಾಕಿಕೊಂಡಿದ್ದಾರೆ. ಎಷ್ಟು ಕೋಟಿ ರೂಪಾಯಿಗಳ ಆಸ್ತಿಯನ್ನು ಸರ್ಕಾರ ವಶಪಡಿಸಿಕೊಂಡಿದೆ? ಅದರ ಬಗ್ಗೆ ವಿವರವಾದ ಮಾಹಿತಿ ಕೊಡಿ.

SRI. H.C. SRIKANTAIAH : Unauthorised construction of buildings on the Government lands - 24042 acres, Extent of acres - 1,66,435 acres, Approximate market value : 27.84 crores, un-authorised cultivation of Government lands within 18 Kms., of the Bangalore City Corporation-within green belt -6,334 Extent : 10,883 acres, approximately value : 870 crores. Bogus records being created to grab Governbment lands to be considered for disposal after amending the Act and Rules--about 208 cases, Extent : 4821 acres, value : 80 Crores; Un-authorised construction of buildings on ownership lands, private lands without obtaining permission for conversion to be regularised after leying conversion fee and penalty : 7304 cases, Extent : 14,366 Acres Value : 237.87 crores, Disposal of B. Kharb lands belonging to Government : 23,668 cases, 5897 acres, value : 117-71 crores Total 2255.47 Crores.

ಶ್ರೀ ಸಿ. ಚನ್ನಿಗಪ್ಪ : ಮಾನ್ಯ ಅಧ್ಯಕ್ಷರೆ, ಬೆಂಗಳೂರು ಸುತ್ತಮುತ್ತ ಬಾಗಲಕುಂಟೆ ಸರ್ವೆ ನಂ.85 ರಲ್ಲಿ ಮೂರು ಎಕರೆ ಜಮೀನಿನಲ್ಲಿ ಸುಮಾರು ಎರಡು ಕೋಟಿ ರೂಪಾಯಿಗಳಷ್ಟು ಜಮೀನಿನಲ್ಲಿ ಬೇರೆ ಯಾರೋ ಕಟ್ಟಡ ಕಟ್ಟುತ್ತಿದ್ದಾರೆ. ಇದರ ಬಗ್ಗೆ ಸರ್ಕಾರ ಏನು ಕ್ರಮ ತೆಗೆದುಕೊಂಡಿದೆ ಎಂದು ತಿಳಿಸಬೇಕು. ಮಾನ್ಯ ಅಧ್ಯಕ್ಷರೆ, ಸರ್ವೆ ನಂ. 39,40 ಮತ್ತು 42ರಲ್ಲಿ ಸುಮಾರು ಎರಡು ಮೂರು ಕೋಟಿ ರೂಪಾಯಿಗಳಷ್ಟು ಬೆಲೆಬಾಳುವ 18 ರಿಂದ 20 ಗುಂಟೆ ಜಮೀನನ್ನು ರಾಮಯ್ಯ ಎನ್ನುವವರು ತಮ್ಮ ವಶಕ್ಕೆ ತೆಗೆದುಕೊಂಡಿರುವುದಕ್ಕೆ ಸಂಬಂಧಪಟ್ಟಂತೆ ನಗರಪಾಲಿಕೆ ಸದಸ್ಯರು ಕಂಪ್ಲೆಂಟ್ ಕೊಟ್ಟಿದ್ದರೂ ಕೂಡ ಇವೊತ್ತಿನವರೆಗೂ ಅವರ ಬಗ್ಗೆ ಕ್ರಮ ತೆಗೆದುಕೊಂಡಿರುವುದಿಲ್ಲ. ಈ ಪ್ರಕರಣದಲ್ಲಿ ಪೊಲೀಸಿನವರು ಕೂಡ ಷಾಮೀಲಾಗಿದ್ದಾರೆ ಎಂದು ನಗರಪಾಲಿಕೆ ಸದಸ್ಯರು ಗೃಹ ಸಚಿವರಿಗೆ ದೂರು ಕೊಟ್ಟಿದ್ದಾರೆ. ಈ ದೂರಿನ ಮೇಲೂ ಕೂಡ ಇನ್ನೂ ಕ್ರಮ ತೆಗೆದುಕೊಂಡಿಲ್ಲದ ಪ್ರಯುಕ್ತ ಮಾನ್ಯ ಸಚಿವರು ಮುಂದೆ ಏನು ಕ್ರಮ ತೆಗೆದುಕೊಳ್ಳುತ್ತೀರಿ ಎಂಬ ಬಗ್ಗೆ ದಯವಿಟ್ಟು ನನಗೆ ಈಗ ತಿಳಿಸಬೇಕು.

ಶ್ರೀ ಹೆಚ್. ಸಿ. ಶ್ರೀಕಂಠಯ್ಯ : ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ಸದರಿ ಪ್ರಕರಣಕ್ಕೆ ಸಂಬಂಧಪಟ್ಟಂತೆ ಪೂರ್ಣ ವಿವರಗಳನ್ನು ನನಗೆ ಕೊಟ್ಟರೆ ನಾನು ಕ್ರಮ ತೆಗೆದುಕೊಳ್ಳುತ್ತೇನೆ.

ಶ್ರೀ ಎಸ್. ಸುರೇಶ್‌ಕುಮಾರ್ : ಮಾನ್ಯ ಅಧ್ಯಕ್ಷರೆ, ಬೆಂಗಳೂರು ನಗರದ ಸುತ್ತಮುತ್ತಲು ಜಮೀನು ಕಬಳಿಕೆಯಾಗಿರುವುದು ನಿಜ. ಸರ್ಕಾರವೇ ಕೊಟ್ಟಿರುವ ಅಂಕಿಅಂಶದ ಪ್ರಕಾರ 80 ಕೋಟಿ ರೂಪಾಯಿಗಳು ಎಂದು ಹೇಳಿರುವುದು ಪೂರ್ಣ ಸತ್ಯವಾದ ಅಂಶವಾಗಿಲ್ಲ. ಇದು ಅರ್ಧ ಅಥವಾ ಕಾಲು ಭಾಗದ ಸತ್ಯವಿರಬಹುದು. ಈ ಭೂ-ಕಬಳಿಕೆ ಸುಲಭಸಾಧ್ಯವಾದುದಲ್ಲ. ಈ ಕಬಳಿಕೆ ಕಂದಾಯ ಇಲಾಖೆಯಲ್ಲಿರುವ ಅಧಿಕಾರಿಗಳೂ ಕೂಡ ಷಾಮೀಲಾಗಿರುತ್ತಾರೆ. ಈ ರೀತಿಯಲ್ಲಿ ಭೂಕಬಳಿಕೆಗೆ ಕಾರಣಕರ್ತರಾದ ಎಷ್ಟು ಮಂದಿ ಅಧಿಕಾರಿಗಳನ್ನು ನೀವು ಗುರುತಿಸಿದ್ದೀರಿ? ಇದರಲ್ಲಿ ಎಷ್ಟು ಜನರ ಮೇಲೆ ನೀವು ಕ್ರಮ ತೆಗೆದುಕೊಂಡಿದ್ದೀರಾ?

ಶ್ರೀ ಹೆಚ್. ಶ್ರೀಕಂಠಯ್ಯ : ಮಾನ್ಯ ಅಧ್ಯಕ್ಷರೆ, ಒಟ್ಟು 67 ಸಿಬ್ಬಂದಿಗಳ ಮೇಲೆ ಈಗಾಗಲೇ ಕ್ರಮ ತೆಗೆದುಕೊಳ್ಳಲಾಗಿದೆ. ಇದರಲ್ಲಿ 6 ತಹಸೀಲ್ದಾರರು, 13 ಶಿರಸ್ತೇದಾರರು, 6 ತಹಶೀಲ್ದಾರರು, 13 ಶಿರಸ್ತೇರಾರರು, 6 ರೆವಿನ್ಯೂ ಇನ್ಸ್‌ಪೆಕ್ಟರ್‌ಗಳು, 39 ವಿಲೇಜ್ ಅಕೌಂಟೆಂಟ್‌ಗಳು, ಒಬ್ಬರು ಸರ್ವೆಯರ್ ಮತ್ತು ಇಬ್ಬರು ಪ್ರಥಮ ದರ್ಜೆ ಸಹಾಯಕರುಗಳು ಇದ್ದಾರೆ. ಅವರನ್ನು ನಾವು ಈಗಾಗಲೇ ಸಸ್ಪೆನ್‌ಶನ್‌ನಲ್ಲಿಟ್ಟಿದ್ದೇವೆ. ಈಗ ಎನ್‌ಕ್ವೈರಿ ಕೂಡ ಮಾಡಿಸುತ್ತಿದ್ದೇವೆ.

ಶ್ರೀ ಬಿ. ಸೋಮಶೇಖರ್ : ಬೆಂಗಳೂರು ನಗರದ ಸುತ್ತಮುತ್ತ ಕೆರೆಯಂಗಳದ ಜಮೀನು ಇರಬಹುದು, ಖರಾಬ್ ಜಮೀನು ಇರಬಹುದು ಮತ್ತಿನ್ನಿತರ ಜಮೀನುಗಳನ್ನು ಕೆಲವರು ಆಕ್ಕೈರ್ ಮಾಡಿಕೊಂಡು ದೊಡ್ಡ ದೊಡ್ಡ ಕಮರ್ಷಿಯಲ್ ಕಾಂಪ್ಲೆಕ್ಸ್ ಕಟ್ಟಿರುವುದು ನಮ್ಮ ಗಮನಕ್ಕೆ ಬಂದಿದೆ. ನಾನು ಮಂತ್ರಿಯಾಗಿದ್ದಾಗ ಸರ್ವೆ ಮಾಡಿಸಿ ಒಂದು ಆದೇಶವನ್ನು ಹೊರಡಿಸಿ, ಅದರಲ್ಲಿ ಏನು ಹೇಳಲಾಗಿತ್ತೆಂದರೆ ಸರ್ಕಾರಿ ಜಮೀನಿನಲ್ಲಿ ಯಾವ ಯಾವ ದೊಡ್ಡ ದೊಡ್ಡ ಕಮರ್ಷಿಯಲ್ ಕಾಂಪ್ಲೆಕ್ಸ್ ಇರುತ್ತದೆಯೋ ಅದನ್ನು ಡೆಮಾಲಿಷ್ ಮಾಡದೇ ಹೇಗಿದೆಯೋ ಹಾಗೆ ಪಬ್ಲಿಕ್ ಆಕ್ಷನ್ ಮಾಡಬೇಕು ಎಂದು ಹೇಳಲಾಗಿತ್ತು. ಆದರೆ ಇದನ್ನು ಜಾರಿಗೆ ತರುವಷ್ಟರಲ್ಲಿ ನಮ್ಮ ಸರ್ಕಾರ ಅಧಿಕಾರದಲ್ಲಿ ಇರಲಿಲ್ಲ. ಏಕೆಂದರೆ ಕೋಟ್ಯಾಂತರ ರೂಪಾಯಿಗಳ ಕಟ್ಟಡವನ್ನು ಕೆಡುವುದಕ್ಕಿಂತ ಇದು ಉತ್ತಮ ಕಾರ್ಯಕ್ರಮವಾಗಿದೆ. ಹರಾಜಿನಿಂದ ಬಂದ ಹಣವನ್ನು ಸರ್ಕಾರಕ್ಕೆ ತುಂಬಿಕೊಳ್ಳಲು ಅನುಕೂಲವಾಗುತ್ತದೆ. ಈಗ ಏನು 80 ಕೋಟಿ ರೂಪಾಯಿಗಳ ಸಂಖ್ಯೆಯನ್ನು ಕೊಟ್ಟರೋ ಅದು ಅಷ್ಟು ಮಾತ್ರವಲ್ಲ, ನಿಜವಾಗಿಯೂ ಸಾವಿರಾರು ಕೋಟಿ ರೂಪಾಯಿಗಳ ಭೂ ಕಬಳಿಕೆಯಾಗಿದೆ. ಈ ಸರ್ಕಾರ ಹರಾಜು ಮಾಡುವ ಕ್ರಮವನ್ನು ಜಾರಿಗೆ ತಂದಿದೆಯೇ ಎಂಬ ಬಗ್ಗೆ ಹೇಳಬೇಕು ಮತ್ತು ಇದನ್ನು ಜಾರಿಮಾಡಬೇಕೆಂದು ನಾನು ಒತ್ತಾಯ ಮಾಡುತ್ತೇನೆ.

ಶ್ರೀ ಹೆಚ್. ಸಿ. ಶ್ರೀಕಂಠಯ್ಯ : ಮಾನ್ಯ ಅಧ್ಯಕ್ಷರೆ, ಹರಾಜು ಮಾಡಬೇಕೆಂದು ತೀರ್ಮಾನ ಮಾಡಿದ್ದೇವೆ. ಸರ್ಕಾರಿ ಆಜ್ಞೆಯನ್ನು ಹೊರಡಿಸಿ ಹರಾಜನ್ನು ಮಾಡುತ್ತೇವೆ.

ಶ್ರೀ ಬಿ.ಬಿ.ಶಿವಪ್ಪ : ಮಾನ್ಯ ಅಧ್ಯಕ್ಷರೆ, ಬೆಂಗಳೂರು ನಗರದ ಸುತ್ತಮುತ್ತಲಿನ ಜಾಗಗಳ ಬೆಲೆ ಜಾಸ್ತಿ ಇರುವುದರಿಂದ ಇಂದು ಸರ್ಕಾರ ಒಂದು ಹೆಜ್ಜೆ ಮುಂದೆ ಹೋಗಿ ಸರ್ಕಾರಿ ಭೂಕಬಳಿಕೆಯನ್ನು ಗುರುತಿಸಿ ಕ್ರಮ ತೆಗೆದುಕೊಳ್ಳುತ್ತಿದ್ದಾರೆ. ಇದು ಕೇವಲ ಬೆಂಗಳೂರು ನಗರದ ಸುತ್ತಮುತ್ತಲಿನಲ್ಲಿ ಮಾತ್ರವಲ್ಲದೇ ಇಡೀ ರಾಜ್ಯದಲ್ಲಿರುವ ಪ್ರತಿಯೊಂದು ಜಿಲ್ಲೆ ಹಾಗೂ ತಾಲ್ಲೂಕುಗಳಲ್ಲಿಯೂ ಭೂ ಕಬಳಿಕೆ ನಡೆದುಕೊಂಡು ಬಂದಿದೆ. ನನ್ನ ಸಕಲೇಶಪುರ ಕ್ಷೇತ್ರದಲ್ಲಿಯೇ ಸುಮಾರು 100 ಎಕರೆಗೂ

ಹೆಚ್ಚು ಭೂಮಿ ಎನ್‌ಕ್ರೋಚ್‌ಮೆಂಟ್ ಆಗಿದೆ. ಇಂದು ಸರ್ಕಾರ ಒಂದು ಸಣ್ಣ ಕಟ್ಟಡ ಕಟ್ಟಬೇಕೆಂದರೂ ಜಾಗವಿಲ್ಲವೆಂದು ಹೇಳುತ್ತಾರೆ. ಬೆಂಗಳೂರು ನಗರದ ಸುತ್ತಮುತ್ತಲಿನ ಭೂ ಕಬಳಿಕೆಗೆ ಏನು ಕ್ರಮ ತೆಗೆದುಕೊಳ್ಳಲಾಗುತ್ತಿದೆಯೋ ಅದೇ ಕ್ರಮವನ್ನು ಇಡೀ ರಾಜ್ಯದ ಪ್ರತಿಯೊಂದು ಜಿಲ್ಲೆ ಹಾಗೂ ತಾಲ್ಲೂಕುಗಳಲ್ಲಿಯೂ ತರಬೇಕು. ಇಂದು ಒಂದು ಸ್ಮಶಾನ ಕಟ್ಟಲೂ ಕೂಡ ಜಾಗವಿಲ್ಲವಾಗಿದೆ. ಪ್ರತಿಕೆಯಲ್ಲಿ ಬಂದ ಸುದ್ದಿ ಎಲ್ಲರೂ ಓದಿರಬೇಕು ಬಸವಕಲ್ಯಾಣದಲ್ಲಿ ಒಬ್ಬಾಕೆ ತನ್ನ ಸತ್ತ ಮಗುವನ್ನು ಹೂಳಲಿಕ್ಕೆ ಜಾಗವಿಲ್ಲದೇ ಒಂದು ದಿನ ಮನೆಯಲ್ಲಿಯೇ ಇಟ್ಟುಕೊಂಡು ಕಡೆಗೆ ತನ್ನ ಮನೆಯ ಮುಂದೆಯೇ ಹೂತಿಟ್ಟು ಕೊಂಡಿದ್ದಾಳೆ. ಆದುದರಿಂದ ಒತ್ತುವರಿ ಮಾಡಿಕೊಂಡಿರುವ ಜಮೀನನ್ನು ತೆರವು ಮಾಡಿಸಲು ಕ್ರಮ ತೆಗೆದುಕೊಳ್ಳಬೇಕಾದ ಅಗತ್ಯತೆ ತೀವ್ರವಾಗಿದೆಯೆಂದು ನಾನು ಹೇಳಬಯಸುತ್ತೇನೆ.

ಶ್ರೀ ಹೆಚ್.ಸಿ. ಶ್ರೀಕಂಠಯ್ಯ : ಮಾನ್ಯ ಅಧ್ಯಕ್ಷರೆ, ಈಗಾಗಲೇ ಎಲ್ಲಾ ಜಿಲ್ಲಾಧಿಕಾರಿಗಳಿಗೆ ಆದೇಶ ಕೊಟ್ಟು ಯಾವುದೇ ಜಿಲ್ಲೆಯಲ್ಲಿ ಭೂ ಅತಿಕ್ರಮಣ ಪ್ರಕರಣ ಕಂಡುಬಂದರೆ ಆದಷ್ಟು ಜಾಗ್ರತೆ ತೆರವು ಮಾಡಿಸಿ ಕ್ರಮ ತೆಗೆದುಕೊಳ್ಳಬೇಕೆಂದು ಸೂಚಿಸಿದ್ದೇನೆ.

ಶ್ರೀ ಸಿ. ಬೈರೇಗೌಡ : ಮಾನ್ಯ ಅಧ್ಯಕ್ಷರೆ, ರಾಮನಗರ ತಾಲ್ಲೂಕಿನ ಬಿಡದಿ ಹೋಬಳಿಯಲ್ಲಿ ಕೆ.ಐ.ಎ.ಡಿ.ಬಿ. ಯವರು ಕಾರಿನ ಕಾರ್ಖಾನೆಗೋಸ್ಕರ ಜಮೀನನ್ನು ವಶಪಡಿಸಿಕೊಂಡಿದ್ದಾರೆ. ಅದರಲ್ಲಿ ಸುಮಾರು 8 ಎಕರೆ ಕೆರೆಯಂಗಳದ ಪ್ರದೇಶವಿದೆ. ಅಲ್ಲಿ ಸುಮಾರು ಒಂದು ಎಕರೆ 50 ರಿಂದ 60 ಲಕ್ಷ ರೂಪಾಯಿಗಳಷ್ಟು ಬೆಲೆಬಾಳುತ್ತದೆ. ಆ ಪ್ರದೇಶವನ್ನು ಕಿರ್ಲೋಸ್ಕರ್ ಟಯೋಟಾಗೋಸ್ಕರ ವಶಪಡಿಸಿಕೊಂಡಿದ್ದಾರೆ. ಈಗ ಸರ್ಕಾರ ಒದಗಿಸಿರುವ ಪಟ್ಟಿಯಲ್ಲಿ ಆ ಜಾಗದ ವಿಷಯವೇ ಇಲ್ಲ. ಕೇವಲ ಸಣ್ಣಪುಟ್ಟ ಜಮೀನು ಅಕ್ವೈರ್ ಮಾಡಿಕೊಂಡಿರುವವರ ಹೆಸರಿದೆಯೇ ಹೊರತು ದೂಡ್ಡ ದೂಡ್ಡ ಪೆಡಂಭೂತಗಳ ಹೆಸರು ಇಲ್ಲಿ ಇಲ್ಲವೇ ಇಲ್ಲ. ಕೆ.ಐ.ಎ.ಡಿ.ಬಿ. ಮೂಲಕ 8 ಎಕರೆ ಕೆರೆಯಂಗಳವನ್ನು ಮುಚ್ಚಿ ಕಿರ್ಲೋಸ್ಕರ್ ಟಯೋಟಾರವರು ವಶಪಡಿಸಿಕೊಂಡಿದ್ದಾರೆ. ಇದರ ಮೇಲೆ ಏನು ಕ್ರಮವನ್ನು ತೆಗೆದುಕೊಂಡಿದ್ದೀರಿ ಎಂಬ ಬಗ್ಗೆ ತಿಳಿಸಬೇಕು.

ಶ್ರೀ ಹೆಚ್.ಸಿ. ಶ್ರೀಕಂಠಯ್ಯ : ರೆವಿನ್ಯೂ ಲ್ಯಾಂಡ್ ಎಲ್ಲೆಲ್ಲಿ ಅತಿಕ್ರಮಣವಾಗಿದೆ ಅಲ್ಲಿ ಕ್ರಮ ತೆಗೆದುಕೊಂಡಿದ್ದೇವೆ. ಆದರೆ ಇವರು ಹೇಳುತ್ತಿರುವುದು ಕೆ.ಐ.ಎ.ಡಿ.ಬಿ. ಯವರು ಅಕ್ವೈರ್ ಮಾಡಿಕೊಂಡಿರುವ ವಿಷಯವಾಗಿದೆ.

ಶ್ರೀ ಬಿ. ಸೋಮಶೇಖರ್ : ಮಾನ್ಯ ಅಧ್ಯಕ್ಷರೆ, ಕೆ.ಐ.ಎ.ಡಿ.ಬಿ. ಯವರು ವಶಪಡಿಸಿಕೊಂಡಿರುವ ಒಟ್ಟಾರೆ ಜಮೀನಿನ ಮದ್ಯೆ 8 ಎಕರೆ ಕೆರೆಯಂಗಳದ ಪ್ರದೇಶ ಸರ್ಕಾರಕ್ಕೆ ಸೇರಿದ್ದಾಗಿದೆ. ನೀವು ಬೇಕಾದರೆ ದಾಖಲೆ ತೆಗೆಸಿನೋಡಿ.

ಶ್ರೀ ಹೆಚ್.ಸಿ. ಶ್ರೀಕಂಠಯ್ಯ : ಆ ಜಾಗ ರೆವಿನ್ಯೂ ಡಿಪಾರ್ಟ್‌ಮೆಂಟ್‌ಗೆ ಸೇರಿದ್ದೇ ಆದರೆ ಸೂಕ್ತ ಕ್ರಮವನ್ನು ಆದಷ್ಟು ಜಾಗ್ರತೆ ತೆಗೆದುಕೊಳ್ಳುತ್ತೇನೆ.

ಶ್ರೀ ವಿ. ಸೋಮಣ್ಣ : ಮಾನ್ಯ ಅಧ್ಯಕ್ಷರೆ, ಮಾನ್ಯ ಸಚಿವರು ಬೆಂಗಳೂರು ನಗರದ ಸುತ್ತಮುತ್ತ ಅತಿಕ್ರಮಣವಾದ ಕಟ್ಟಡಗಳನ್ನು ತೆಗೆಸುವ ಕಾರ್ಯವನ್ನು ಮಾಡಿಸುತ್ತಿದ್ದಾರೆ. ಬೆಂಗಳೂರು ನಗರದ

ಸುತ್ತಮುತ್ತಲಿರುವ ಕೆರೆಗಳನ್ನು ಅರಣ್ಯ ಇಲಾಖೆಗೆ ವಹಿಸಿದ್ದಾರೆ. ಆದರೆ ಆ ಕೆರೆಗಳ ಒಟ್ಟು ವಿಸ್ತೀರ್ಣ ಎಷ್ಟಿದೆ ಎಂಬ ಬಗ್ಗೆ ಫಾರೆಸ್ಟ್ ಡಿಪಾರ್ಟ್‌ಮೆಂಟ್, ಸರ್ವೆ ಡಿಪಾರ್ಟ್‌ಮೆಂಟ್ ಮತ್ತು ರೆವಿನ್ಯೂ ಡಿಪಾರ್ಟ್‌ಮೆಂಟ್‌ನವರನ್ನೊಳಗೊಂಡಂತೆ ಜಂಟಿಯಾಗಿ ಕಾರ್ಯಾಚರಣೆ ಮಾಡಿಸಿ ತದನಂತರ ಆ ಕೆರೆಗಳ ಜಾಗಗಳಲ್ಲಿ ಏನು ಈಗಾಗಲೇ ಎನ್‌ಕ್ರೋಚ್‌ಮೆಂಟ್ ಆಗಿದೆಯೋ ಅದನ್ನು ತಕ್ಷಣ ಫಾರೆಸ್ಟ್ ಡಿಪಾರ್ಟ್‌ಮೆಂಟ್‌ಗೆ ವಹಿಸಿಕೊಡುವುದಕ್ಕೆ ಕಾರ್ಯಕ್ರಮ ಹಮ್ಮಿಕೊಳ್ಳಲು ಸರ್ಕಾರ ಯೋಜನೆ ಮಾಡಿದೆಯೇ ಎಂಬ ಬಗ್ಗೆ ತಿಳಿಸಬೇಕು. ಇನ್ನು ಬೆಂಗಳೂರು ನಗರದ ಸುತ್ತಮುತ್ತ ಅರಣ್ಯ ಇಲಾಖೆಯವರು ಸುಮಾರು ಕೆರೆಗಳನ್ನು ಅರ್ಧಂಬರ್ಧ ಮಾಡಿ ನಿಲ್ಲಿಸುತ್ತಿದ್ದಾರೆ. ಇದರ ಬಗ್ಗೆ ನಾವು ಅವರನ್ನು ಕೇಳಿದರೆ, ನಾವೇನು ಮಾಡುವುದು, ರೆವಿನ್ಯೂ ಇಲಾಖೆಯವರು ಮತ್ತು ಸರ್ವೆ ಡಿಪಾರ್ಟ್‌ಮೆಂಟ್‌ನವರು ಸರಿಯಾಗಿ ಪ್ರದೇಶವನ್ನು ಗುರುತಿಸಿ ನಮಗೆ ಕೊಡಬೇಕಾದ ಸಹಕಾರವನ್ನು ಕೊಡುತ್ತಿಲ್ಲ ಎಂದು ಹೇಳುತ್ತಿದ್ದಾರೆ. ಆದುದರಿಂದ ದಯಮಾಡಿ ಸಚಿವರು ಒಂದು ಸಭೆಯನ್ನು ಕರೆದು ಕೆರೆಗಳು ಎಷ್ಟಿವೆ ಮತ್ತು ಅವುಗಳ ವಿಸ್ತೀರ್ಣವೆಷ್ಟು ಎಂಬ ಬಗ್ಗೆ ಗುರುತಿಸಿ ಅದನ್ನು ಅರಣ್ಯ ಇಲಾಖೆಗೆ ಹಸ್ತಾಂತರ ಮಾಡುವುದಕ್ಕೆ ಕ್ರಮ ತೆಗೆದುಕೊಳ್ಳುತ್ತಾರೆಯೇ ಎಂಬ ಬಗ್ಗೆ ದಯಮಾಡಿ ತಿಳಿಸಬೇಕು.

ಶ್ರೀ ಹೆಚ್.ಸಿ. ಶ್ರೀಕಂಠಯ್ಯ : ಮಾನ್ಯ ಅಧ್ಯಕ್ಷರೆ, ಆದಷ್ಟು ಜಾಗ್ರತೆ ಕ್ರಮ ತೆಗೆದುಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತೇನೆ.

ನಾಗಮಂಗಲ ತಾಲ್ಲೂಕಿನಲ್ಲಿ ಸಾರಿಗೆ ವ್ಯವಸ್ಥೆ

60 (683) ಶ್ರೀ ಚಲುವರಾಯ ಸ್ವಾಮಿ .ಎಸ್ (ನಾಗಮಂಗಲ) : ಮಾನ್ಯ ಸಾರಿಗತ ಸಚಿವರು ಈ ಕೆಳಕಂ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ

ಅ) ನಾಗಮಂಗಲ ತಾಲ್ಲೂಕಿನಲ್ಲಿ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆ ಡಿಪೋ ನಿರ್ಮಿಸಲು ಉದ್ದೇಶಿಸಲಾಗಿದೆಯೆ ಹಾಗಿದ್ದಲ್ಲಿ ಯಾವಾಗ ಪ್ರಾರಂಭಿಸಲಾಗುವುದು?

ಆ) ನಾಗಮಂಗಲ ತಾಲ್ಲೂಕಿನ ವ್ಯಾಪ್ತಿಯಲ್ಲಿ ಬರುವ ಗ್ರಾಮಾಂತರ ಪ್ರದೇಶಗಳಿಗೆ ತುಮಕೂರು, ಮೈಸೂರು, ಚೆನ್ನರಾಯಪಟ್ಟಣ, ಮಂಡ್ಯ ಹಾಗೂ ಹಾಸನ ಡಿಪೋಗಳಿಂದ ಬಸ್ಸುಗಳು ಸಂಚರಿಸುತ್ತಿದ್ದು ಇವುಗಳು ಸಮಯಕ್ಕೆ ಸರಿಯಾಗಿ ಬರದೆ ಹಾಗೂ ಕೆಲವೊಮ್ಮೆ ಬಸ್ಸುಗಳು ಬರದಿರುವುದರಿಂದ ನಾಗರೀಕರಿಗೆ ತೊಂದರೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಇ) ಬಂದಿದ್ದಲ್ಲಿ ಸಮಯಕ್ಕೆ ಸರಿಯಾಗಿ ಬಸ್ಸುಗಳು ಸಂಚರಿಸುವಂತೆ ಮಾಡಲು ಕ್ರಮ ತೆಗೆದುಕೊಳ್ಳಲಾಗುವುದೇ?

ಶ್ರೀ ಸಿ.ಆರ್. ಸಗೀರ್ ಅಹ್ಮದ್ (ಸಾರಿಗೆ ಸಚಿವರು) :

ಅ) ಹೌದು, ಆದರೆ, ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಗೆ ಸೂಕ್ತ ನಿವೇಶನ ದೊರಕಬೇಕಾಗಿದೆ ನಿವೇಶನ ದೊರಕಿದ ನಂತರ ಡಿಪೋ ನಿರ್ಮಿಸಲು ಕ್ರಮಕೈಗೊಳ್ಳಲಾಗುವುದು.

ಆ) ಹೌದು